ಅಭಿಯಾಚನೆ ಕ್ರಮಾಂಕ-೨೪ ವಾಹನ ತೆರಿಗೆ

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ಪೆಚ್ಚುವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೯೫,೯೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ-೨೮ (ರಸ್ತೆ ಸಾರಿಗೆ)

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆ ಸಂದಾಯ ಮಾಡುವ ಬರತಕ್ಕಂಥ ಪೆಚ್ಚುವನ್ನು ವಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೧೨೫,೬೦,೦೦೦-ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೩,೩೪,೦೦-೦೦೦-ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೧ ಗೃಹನಿರ್ಮಾಣ-ಸರ್ಕಾರಿ ಕಟ್ಟಡಗಳನ್ನು ಬಿಟ್ಟು ಮಾನ್ಯರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ಪೆಚ್ಚುವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩,೭೦,೬೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೮೬,೮೭,೦೦೦ ರೂಪಾಯಿಗಳಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲಂ) ನಾನಂ ಬಿನ್ನವಿಸಿಕೊಳ್ಳುತ್ತೇನೆ.

ಪ್ರಶ್ನೋತ್ತರಗಳು

ಚೆಂಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸವಣೂರು ತಾಲ್ಲೂಕಿನ ಹೂವಿನ ಹಿಪ್ಪರಿಗೆಯಲ್ಲಿ ಸರಕಾರಿ ಶಾಲೆಗೆ ಭೋದನ ಸಿಬ್ಬಂದಿಯಂ ನಿಯೋಜನೆ

೧೮೮೫. ಶ್ರೀ ನಿಲಂಕತಗೌಡ ವಿ. ಪಾಟೀಲ್ (ಶಿಗ್ಗಾಂವ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ.

ಅ) ಸವಣೂರ ತಾಲ್ಲೂಕ್ ಹೂವಿನ ಹಿಪ್ಪರಗಿಯಲ್ಲಿ ಸರಕಾರಿ ಪ್ರೌಢಶಾಲೆ ಪ್ರಾರಂಭವಾಗಿ ಮೂರು ವರ್ಷಗಳಾಗಿರುವುದು ನಿಜವೆ;

ಆ) ಹಾಗಿದ್ದಲ್ಲಿ ಖಾಯಂ ಮುಖ್ಯೋಪಾಧ್ಯಾಯರನ್ನು ನೇಮಿಸದೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ;

ಇ) ಉಳಿದ ಸಿಬ್ಬಂದಿಯಾದ ರೇಖಾ ಚಿತ್ರ ಉಪಾಧ್ಯಾಯರು ಕಲೆ ಉಪಾಧ್ಯಾಯರುಗಳನ್ನು ಗುಮಾಸ್ತರು ಹಾಗೂ ಜವಾನರ ಹುದ್ದೆಗಳನ್ನು ಇಲ್ಲಿಯವರೆಗೆ ತುಂಬದೇ ಇರುವುದಕ್ಕೆ ಕಾರಣವೇನು;

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ಹೂವಿನ ಹಿಪ್ಪರಗಿ ಎಂಬ ಗ್ರಾಮವು ಸವಣೂರು ತಾಲೂಕಿನಲ್ಲಿ ಇರುವುದಿಲ್ಲ, ಆದರೆ ಸವಣೂರು ತಾಲ್ಲೂಕಿನಲ್ಲಿ ಹೂವಿನ ಶಿಗಲಿ ಎಂಬ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಪ್ರಾರಂಭವಾಗಿರುವುದು ನಿಜ;

ಆ) ಖಾಯಂ ಮುಖ್ಯೋಪಾಧ್ಯಾಯರನ್ನು ವರ್ಗಾಯಿಸಿ ನೇಮಿಸಲಾಗಿದೆ;

ಇ) ಉಳಿದ ಸಿಬ್ಬಂದಿಯನ್ನು ಈ ಕೆಳಕಂಡ ಕಾರಣಗಳಿಂದ ತುಂಬಲಾಗಿಲ್ಲ.

೧) ರೇಖಾ ಚಿತ್ರ ಉಪಾಧ್ಯಾಯರು ನೇಮಕಾತಿ ಸಮಿತಿಯಿಂದ ಆಯ್ಕೆಯಾದ ಅಭ್ಯರ್ಥಿಯಿಂದ ತುಂಬ ಬೇಕಾಗಿರುವುದರಿಂದ,

೨) ಕಲಾ ಶಿಕ್ಷಕರ ಹುದ್ದೆಗೆ ನಿಯೋಜಿಸಲಾಗಿದ್ದು ಅಲ್ಲಿಂದ ಬಿಡುಗಡೆ ಹೊಂದಿ ಅವರು ಹಾಜರಾಗದೇ ಇದ್ದುದರಿಂದ;

೩) ಗುಮಾಸ್ತರ ಹುದ್ದೆಯನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಮಿಸಲಾಗಿರುವುದರಿಂದ;

೪) ಜವಾನರ ಹುದ್ದೆ ತುಂಬಲು ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ.

ಶ್ರೀ ನೀಲಕಂಠಗೌಡ ವಿ. ಪಾಟೀಲ್.—ಅಧ್ಯಕ್ಷರೆ, ಖಾಯಂ ಉಪಾಧ್ಯಾಯರನ್ನು ಈ ವರ್ಷ ನೇಮಿಸಲಾಯಿತು ಎಂದರೆ ಯಾವಾಗ ನೇಮಿಸಲಾಯಿತು ಎಂದು ಕೇಳುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ.—ಖಾಯಂ ಮುಖ್ಯೋಪಾಧ್ಯಾಯರನ್ನು ಈ ವರ್ಷ ನೇಮಿಸಲಾಗಿದೆ ಎಂದು ಹೇಳಿದೆ. ಖಾಯಂ ಉಪಾಧ್ಯಾಯರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿದೆ. ಬೇರೆಯವರನ್ನು ಅಲ್ಲಿಗೆ ಹಾಕಿದ್ದೇವೆ, ಅವರು ರಿಲೀವ್ ಮಾಡಿಲ್ಲ. ನಾವು ಎಲ್ಲಿಂದ ಟ್ರಾನ್ಸ್‌ಫರ್ ಮಾಡಿದ್ದೇವೆ ಅಲ್ಲಿಂದ ಅವರು ರಿಲೀವ್ ಆಗಿ ಬಂದಿಲ್ಲ.

ಶ್ರೀ ನೀಲಕಂಠಗೌಡ ವಿ. ಪಾಟೀಲ್.—ಆದಷ್ಟು ತೀವ್ರವಾಗಿ ಇದನ್ನು ಮಾಡಿಕೊಡಬೇಕು.

ಶ್ರೀ ಎಚ್. ಜಿ. ಗೋವಿಂದೇಗೌಡ.—ಆಯಿತು, ಆದಷ್ಟು ಬೇಗ ಮಾಡಿಸುತ್ತೇನೆ.

ಅಧ್ಯಕ್ಷರು.— ಶ್ರೀ, ಶಿವರಾಮು ರೆಡ್ಡಿ. (ಗೈರು ಹಾಜರು)

ಶ್ರೀ ಶಿವಾನಂದ ಕೌಜಲಗಿ—(ಗೈರು ಹಾಜರು)

ಶ್ರೀ ಶಿವಸಂಜಪ್ಪ—(ಗೈರು ಹಾಜರು)

ಹುಬ್ಬಳ್ಳಿ ಧಾರವಾಡನಗರ ವ್ಯಾಪ್ತಿಯಲ್ಲಿರುವ ಸರಕಾರಿ ಪ್ರಾಥಮಿಕ ಶಾಲೆಗಳು

೧೬೦೫. ಶ್ರೀ ಚಂದ್ರುಕಾಂತ್ ಜಿ. ಬೆಲ್ಲದ್ (ಧಾರವಾಡ)—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಧಾರವಾಡ ಮಹಾನಗರ ಸಭೆಯ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಕೊಠಡಿಗಳ ಸಂಖ್ಯೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಅಲ್ಲಲ್ಲಿ ಸಧ್ಯ ಅವಶ್ಯಕತೆಯಿರುವ ಕೊಠಡಿ ಸಂಖ್ಯೆ ಎಷ್ಟು? ಹಾಗೂ ಈಗ ಮಕ್ಕಳ ಸಂಖ್ಯೆಗೆ ಅನುಸಾರ ಅವಶ್ಯವಾಗಿರುವ ಪ್ರಾಥಮಿಕ ಶಾಲೆಯ ಕೊಠಡಿಗಳನ್ನು (ರೂಮುಗಳು) ಕಟ್ಟಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಧಾರವಾಡದಲ್ಲಿ ಅನೇಕ ಹೊಸ ಬಡಾವಣೆಗಳು ಬೆಳೆದು ಬಂದಿರುವುದರಿಂದ ಅಲ್ಲಿ ಹೊಸ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವುದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಪರಂತ್ರಿಗಳು).—

ಆ) ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ ೨೮

ಕೊಠಡಿಗಳ ಸಂಖ್ಯೆ ೧೦೦

ವಿದ್ಯಾರ್ಥಿಗಳ ಸಂಖ್ಯೆ